ಪ್ರಾರಂಭವಾಗಲಿ. ಆ 23 ಹಳ್ಳಿಗಳಿಗೆ ಬಾಗಲಕೋಟೆ ಸುಮಾರು ನೂರು. ಕಿ.ಮೀ. ದೂರ ಆಗುತ್ತದೆ ಎಂದು ನನಗೂ ಕೂಡ ಗೊತ್ತಿದೆ. ಆದರೆ ಈ ಸಧ್ಯಕ್ಕೆ ಅದನ್ನು ಮಾಡುವುದು ಬೇಡ. ಈ ತಾಲ್ಲೂಕು ರೀ ಆರ್ಗನೈಸೇಶನ್ ಮಾಡುವಾಗ ಅವರ ಮನವಿಯನ್ನು ನಾವು ಬಹಳ ಗಂಭೀರ ರೀತಿಯಿಂದ ಪರಿಗಣಿಸುತ್ತೇನೆ.

ಶ್ರೀ ಬಸವನಗೌಡ ಸೋಮನಗೌಡ ಪಾಟೀಲ್ : ಇಡೀ ತಾಲ್ಲೂಕುಗಳನ್ನು ಬೇರೆ ಜಿಲ್ಲೆಗೆ ವರ್ಗಾವಣೆ ಮಾಡುವ ಬೇಡಿಕೆ ಇರಬಹುದು. ಆದರೆ ಇದು ಒಂದು ತಾಲ್ಲೂಕಿನಲ್ಲಿರುವ 23 ಹಳ್ಳಿಗಳ ಸಮಸ್ಯೆ ಇದೆ. ಇಷ್ಟೊಂದು ಸರಳವಾಗಿರುವ ಪ್ರಶ್ನೆಗೆ ಇವರು ಇಷ್ಟೊಂದು ಜಟಿಲವಾಗಿ ಏಕೆ ಮಾಡಿಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ಈ ಹಳ್ಳಿಗಳಿಂದ ಬಾಗಲಕೋಟೆ ಸುಮಾರು 160 ಕಿ.ಮೀ. ದೂರ ಆಗುತ್ತದೆಂದು ಅವರಿಗೂ ಗೊತ್ತಿದೆ. ಆದ್ದರಿಂದ ಕಂದಾಯ ಸಚಿವರು ಈ ಸಮಸ್ಯೆಯನ್ನು ಪರಿಹರಿಸಬೇಕು ಇಲ್ಲದಿದ್ದರೆ ದೊಡ್ಡ ಹೋರಾಟ ಆಗುತ್ತದೆ. ಜನ ಒಂದು ರೀತಿ ಅಲ್ಲಿ ರೊಚ್ಚಿಗೆ ಏಳುವಂಥ ಪರಿಸ್ಥಿತಿ ಅಲ್ಲಿ ನಿರ್ಮಾಣವಾಗಿದೆ. ಆದಕಾರಣ ದಯಮಾಡಿ ಅಲ್ಲಿ ಶಾಂತ ಪರಿಸ್ಥಿತಿಯನ್ನು ನಿರ್ಮಾಣ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಅಲ್ಲಿರುವ ಗ್ರಾಮಸ್ಥರನ್ನು ಸತ್ಯಾಗ್ರಹ ಹಿಂತೆಗೆದುಕೊಳ್ಳಿ ಎಂದು ಅವರೇ ಮನವಿಯನ್ನು ಮಾಡಿಕೊಳ್ಳಲಿ ಮಾನ್ಯ ಉಪಾಧ್ಯಕ್ಷರೇ.

ಮಲೆನಾಡು ಪ್ರದೇಶ ಮತ್ತು ಇತರೆ ಬಹುತೇಕ ತಾಲ್ಲೂಕುಗಳಲ್ಲಿ ಮಲೆನಾಡು ಹೆಚ್ಚಿನ ಮಳೆಯಿಂದಾಗಿ ತೊಂದರೆ

+ ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : 6-7ನೇ ತಾರೀಖು ಶಿವಮೊಗ್ಗ ಜಿಲ್ಲೆಯಲ್ಲಿ ಕಳೆದ 15-20 ವರ್ಷಗಳಲ್ಲಿ ಹಿಂದೆ ಎಂದೂ ಕಾಣದೇ ಇರತಕ್ಕಂಥ ಮಳೆಯಾಗಿದೆ. ಶಿವಮೊಗ್ಗ ಜಿಲ್ಲೆಯಲ್ಲಿ ಬಹುತೇಕ ತಾಲ್ಲೂಕುಗಳಲ್ಲಿ ರಸ್ತೆಗಳು ಒಡೆದು ಓಡಾಟಕ್ಕೆ ಅಡ್ಡಿಯಾಗಿ ಸಂಚಾರ ನಿಂತು ಹೋಗಿದೆ. ಕೆರೆ ಕಟ್ಟೆಗಳೆಲ್ಲಾ ಪೂರ್ಣವಾಗಿ ಕಿತ್ತುಹೋಗಿವೆ. ಹಾಳಾಗಿ ಹೋಗಿವೆ. ಕಳೆದ ವರ್ಷ ಶಿಕಾರಿಪುರದಲ್ಲಿ ಬರಗಾಲದಿಂದ ನಾವು ಕಷ್ಟವನ್ನು ಅನುಭವಿಸಿದ್ದೇವೆ. ಈಗ ಜಿಲ್ಲಾಪಂಚಾಯತ್‌ಗೆ ಸೇರಿದ 41 ಕೆರೆಗಳು ಒಡೆದು ಹೋಗಿವೆ. ಲೋಕೋಪಯೋಗಿ ಇಲಾಖೆಗೆ ಸೇರಿದ 25 ಸಂಪರ್ಕ ರಸ್ತೆಗಳು ಹಾಳಾಗಿಹೋಗಿವೆ. ಸುಮಾರು 1120 ಎಕರೆ ಬೆಳೆ ಹಾನಿಯಾಗಿದೆ. ಶಿಕಾರಿಪುರದಲ್ಲಿ ಸುಮಾರು ಒಂದು ಕೋಟಿ ಮೂವತ್ತು ಲಕ್ಷ ರೂಪಾಯಿ ಅನಾಹುತವಾಗಿದೆ. ಅದೇ ರೀತಿ ಇತರ ತಾಲ್ಲೂಕಿನಲ್ಲಿಯೂ ಸಹ ಅನಾಹುತವಾಗಿದೆ. ಸಾಗರ ತಾಲ್ಲೂಕಿನಲ್ಲಿ ವರದಾ ನದಿಯು ಉಕ್ಕಿ ಹರಿದು ಒಂದು ಸಾವಿರ ಎಕರೆ ಭತ್ತ ಮುಳುಗಿ ಹೋಗಿದೆ. ಹಾಗೆಯೇ ಕಾನಲೆ, ಮಂಡಗಡಲೆ, ಸೈದೂರು, ಹಿರೆಸೆಲ್ಲೂರು ಗ್ರಾಮಗಳಲ್ಲಿ ನೀರು ನುಗ್ಗಿ ಆ ಗ್ರಾಮಗಳು ಜಲಾವೃತವಾಗಿವೆ. ಶಿವಮೊಗ್ಗದಲ್ಲಿ ತುಂಗಾ ನದಿಯು ತುಂಬಾ ಅಪಾಯದ ಅಂಚಿನಲ್ಲಿದ್ದು ತೀರ್ಥಹಳ್ಳಿಯಲ್ಲಿರತಕ್ಕಂಥ ಸಂಪರ್ಕ ಹಾಳಾಗಿ ಹೋಗಿದೆ. ತೀರ್ಥಹಳ್ಳಿಯಲ್ಲಿ ನಿರೀಕ್ಷೆ ಮಾಡುವುದಕ್ಕೆ ಆಗದೇ ಇರತಕ್ಕಂಥ ರೀತಿಯಲ್ಲಿ ಅನಾಹುತವಾಗಿದೆ.

ಹೊಸನಗರ ತಾಲ್ಲೂಕಿನಲ್ಲಿ ಬಾಣಂತಿ ಕೆರೆ ಒಡೆದು ರಸ್ತೆಗಳು ಕೊಚ್ಚಿಕೊಂಡು ಹೋಗಿವೆ. ಸುಮಾರು ನೂರು ಎಕರೆ ಭತ್ತದ ಪೈರು ನಾಶವಾಗಿದೆ. ನಾನು ಕೇವಲ ಎರಡು ಮೂರು ಸಂಗತಿಗಳನ್ನು ಅಷ್ಟೇ ಹೇಳುತ್ತಿದ್ದೇನೆ. ಒಂದು ಬರಗಾಲ ಎದುರಿಸಿದ್ದೇವೆ. ಈಗ ಕೆರೆ ತುಂಬಿದೆ. ನಾವು ಬೆಳೆಯನ್ನು ಬೆಳೆದುಬಿಟ್ಟಿದ್ದೇವೆ. ಒಡೆದು ಹೋದ ಕೆರೆಯ ರಿಪೇರಿ ತಕ್ಷಣಕ್ಕೆ ಆಗದೇಹೋದರೆ ರೈತರ ಸರ್ವನಾಶವಾಗುತ್ತದೆ. ಆದ್ದರಿಂದ ನಾನು ಹೇಳುವುದೇನೆಂದರೆ ಶಿವಮೊಗ್ಗ ಜಿಲ್ಲೆಯಲ್ಲಿ ಯಾವ ಯಾವ ಕೆರೆಗಳು ಒಡೆದು ಹೋಗಿವೆ ಅದರ ಬಗ್ಗೆ ತಾವು ವರದಿಯನ್ನು ತರಿಸಿಕೊಂಡು ನಾಲ್ಕೈದು ಕೋಟಿ ರೂಪಾಯಿಯನ್ನು ಬಿಡುಗಡೆ ಮಾಡಿ ಆ ಕೆರೆಯನ್ನು ರಿಪೇರಿ ಮಾಡಿದರೆ ಮೇಲಿಂದ ಬರುವ ನೀರು ನಿಂತು ಹೋಗುತ್ತದೆ. ಹಾಗೂ ಬೆಳೆ ಉಳಿಯುತ್ತದೆ. ಮತ್ತು ತಾವು ಪರಿಹಾರವನ್ನು ಕೊಡುವುದು ಉಳಿಯುತ್ತದೆ. ಅಲ್ಲಿಯ ರಸ್ತೆಗಳು ಹಾಳಾಗಿ ಅಲ್ಲಿ ಸಂಚಾರ ಮಾಡಲು ಆಗದೇ ಇರತಕ್ಕಂಥ ಪರಿಸ್ಥಿತಿ ಇದೆ. ಆದಕಾರಣ ಆದಷ್ಟು ಬೇಗ ಅಲ್ಲಿ ನಾಲ್ಕೈದು ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಬೇಕೆಂದು ಕೋರುತ್ತೇನೆ. ಆ ಕಾರ್ಯವನ್ನು ತಾವು ನಾಳೆನೇ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮೊನ್ನೆ ನಾನು ಶಿಕಾರಿಪುರಕ್ಕೆ ಹೋದಾಗ ಅಲ್ಲಿ ಓಡಾಡುವುದಕ್ಕೆ ಆಗದೆ, ಯಾರಿಗೂ ಉತ್ತರ ಕೊಡುವ ಸ್ಥಿತಿಯಲ್ಲಿ ನಾವು ಇಲ್ಲ. ಆದಕಾರಣ ಕದ್ದು ಮುಚ್ಚಿ ಬೆಂಗಳೂರಿಗೆ ಬರಬೇಕಾಯಿತು. ಇಡೀ ಶಿವಮೊಗ್ಗ ಜಿಲ್ಲೆ ಇವ್ಹೊತ್ತು ಅನಾಹುತದಲ್ಲಿ ಸಿಕ್ಕಿಹಾಕಿಕೊಂಡಿದೆ. ಅದಕ್ಕೆ ಏನು ಪರಿಹಾರ ಕಾರ್ಯಕ್ರಮ ತೆಗೆದುಕೊಳ್ಳುತ್ತೀರೋ? ನಿಮಗೆ ವರದಿ ಬಂದಿದೆಯಾ?

ಶ್ರೀ ಅರಗ ಜ್ಞಾನೇಂದ್ರ : ಸನ್ಮಾನ್ಯ ಉಪಾಧ್ಯಕ್ಷರೆ, ಇಡೀ ರಾಜ್ಯದಲ್ಲಿ ಹೆಚ್ಚು ಮಳೆಯಾಗಿ ಸುಭಿಕ್ಷೆಯಾಗಿದೆ ಎಂದು ಜನರು ಸಂತೋಷ ಪಡುವಾಗ ಶಿವಮೊಗ್ಗ ಜಿಲ್ಲೆಯ ಮಲೆನಾಡಿನ ಜನ ನಾವು ಕಣ್ಣೀರು ಹಾಕುವಂಥ ಪರಿಸ್ಥಿತಿ ನಿರ್ಮಾಣವಾಗಿದೆ.

ಶ್ರೀ ಎನ್. ರಾಜಣ್ಣ : ಸನ್ಮಾನ್ಯ ಉಪಾಧ್ಯಕ್ಷರೆ, ಇಡೀ ರಾಜ್ಯದಲ್ಲಿ ಎಂದು ಹೇಳುತ್ತಿದ್ದಾರೆ ಆದರೆ ಬೆಂಗಳೂರಿನ ಸುತ್ತಮುತ್ತ ಸುಮಾರು ನೂರು ಕಿ.ಮೀ. ಡಯಾಮೀಟರ್ ಅಂತರದಲ್ಲಿ ಮಳೆಯೇ ಇಲ್ಲದ ಕಾರಣ ರೈತರು ತೊಂದರೆ ಅನುಭವಿಸುತ್ತಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ರಾಜಣ್ಣನವರೇ, ನಾನು ತಿದ್ದುಪಡಿ ಮಾಡಿಕೊಳ್ಳುತ್ತೇನೆ. ರಾಜ್ಯದ ಕೆಲವು ಭಾಗದ ಜನ ಬಹಳ ಸಂತೋಷಪಟ್ಟಿದ್ದಾರೆ. ಸುಭಿಕ್ಷೆಯಾಗಿದೆ. ಆದರೆ ಶಿವಮೊಗ್ಗ ಜಿಲ್ಲೆಯ, ಮಲೆನಾಡಿನ ಜನ ನಾವು ಕಣ್ಣೀರು ಹಾಕುವ ಹಾಗೆ ಆಗಿದೆ. ಮಲೆನಾಡಿನ ಜನ ನಾವು ಒಂದು ದಿವಸ ಮಳೆ ಜಾಸ್ತಿ ಬಂದರೆ ನಾವು ತಡೆದುಕೊಳ್ಳುತ್ತೇವೆ. ಆದರೆ ಇದು ಬಹು ದೊಡ್ಡ ಮಳೆ ಎಂದು ಹೇಳುವುದಕ್ಕೆ ಆಗದಿದ್ದರೂ ಒಂದು ದಿವಸ ಅತಿವೃಷ್ಟಿಯಾಗಿದೆ. ಹಾಗೂ ಶಿವಮೊಗ್ಗ ಜಿಲ್ಲೆಯಲ್ಲಿ ಒಂದೇ ಒಂದು ದಿವಸ ಸುಮಾರು289.4 ಮಿಲಿ ಮೀಟರ್ ಮಳೆಯಾಗಿದೆ. ಅದನ್ನು ತಡೆದುಕೊಳ್ಳುವಂಥ ಪರಿಸ್ಥಿತಿನಲ್ಲಿ ನಮ್ಮ ಕೆರೆಕಟ್ಟೆಗಳು ಹಾಗೂ ನದಿ ದಂಡೆಗಳು ಇಲ್ಲ. ನನಗೆ ಈಗಾಗಲೇ ವರದಿ ಬಂದಿರುವ ಹಾಗೆ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಸುಮಾರು ಹನ್ನೆರಡು ಮನೆಗಳು ಕುಸಿದು ಬಿದ್ದಿವೆ. ಸಾಕಷ್ಟು ದೊಡ್ಡ ಪ್ರಮಾಣದ ನಷ್ಟವಾಗಿದೆ. ರಾಜ್ಯ ಹೆದ್ದಾರಿಗಳು ಡ್ಯಾಮೇಜ್ ಆಗಿವೆ. ಗ್ರಾಮೀಣ

ಪ್ರದೇಶಗಳ ರಸ್ತೆಗಳಲ್ಲಿ ಹೊಂಡಗುಂಡಿಗಳು ಬಿದ್ದಿವೆ. ಇಷ್ಟೇ ಅಲ್ಲ, ಸೇತುವೆಗಳು, ಮೋರಿಗಳು ಕುಸಿದು ಬಿದ್ದಿವೆ. ದಿನಾಂಕ 6-7 -8ನೇ ತಾರೀಖು ಮೂರು ದಿವಸಗಳ ಕಾಲ ತೀರ್ಥಹಳ್ಳಿ ಹಾಗೂ ಹೊಸನಗರ ತಾಲ್ಲೂಕುಗಳು ಇಡೀ ರಾಜ್ಯದ ಸಂಪರ್ಕವನ್ನು ಕಡಿದುಕೊಂಡಿದ್ದವು. ಶಿವಮೊಗ್ಗದಿಂದ ಮಂಗಳೂರಿಗೆ ಹೋಗುವ ದಾರಿಯಲ್ಲಿ ತೀರ್ಥಹಳ್ಳಿ ಭಾಗದಲ್ಲಿ ಸುಮಾರು ಏಳೆಂಟು ಅಡಿ ನೀರು ನಿಂತು, ಜಲ ಆವೃತ್ತವಾಗಿ ಇಡೀ ತಾಲ್ಲೂಕು ಒಂದು ರೀತಿಯಿಂದ ಐಲ್ಯಾಂಡ್ ಆಗಿತ್ತು. ಇಂತಹ ಒಂದು ದುಸ್ಥಿತಿ ಇದ್ದು, ಸಾಕಷ್ಟು ಬೆಳೆ ಹಾನಿಯಾಗಿದೆ. ಸಾಕಷ್ಟು ಭೂಮಿ ಕೊಚ್ಚಿ ಹೋಗಿದೆ. ದೇಶಿ ಹೊಳೆಯ ದಂಡ ಒಡೆದು ಹೋಗಿ ಸುಮಾರು 150 ಎಕರೆ ಜಮೀನು ಹಾಳಾಗಿದೆ. ಸುಮಾರು ಐದು ವರ್ಷಗಳವರೆಗೆ ನಾವು ಈ ಜಮೀನಿನಲ್ಲಿ ಸಾಗುವಳಿ ಮಾಡುವ ಹಾಗಿಲ್ಲ. ಇಂತಹ ಒಂದು ದುಸ್ಥಿತಿ ನಿರ್ಮಾಣವಾಗಿದೆ. ಹಾಗೂ ಸಾರ್ವಜನಿಕ ಕಟ್ಟಡಗಳು, ಶಾಲಾ ಕಟ್ಟಡಗಳು, ಆಸ್ಪತ್ರೆ ಕಟ್ಟಡಗಳು ಕೂಡ ಕುಸಿದು ಬಿದ್ದಿವೆ. ಇಂತಹ ಒಂದು ದುಸ್ಥಿತಿ ಇರುವಾಗ ಮಾನ್ಯ ಕಂದಾಯ ಸಚಿವರು ಸ್ವಲ್ಪ ಹಣವನ್ನು ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದರು. ಸುಮಾರು ಎರಡು ಲಕ್ಷ ರೂಪಾಯಿಗಳನ್ನು ಜಿಲ್ಲಾಧಿಕಾರಿಗಳು ಬಿಡುಗಡೆ ಮಾಡಿದ್ದಾರೆ. ನಾನು ಮೊನ್ನೆ ಹೋಗಿ ಅವರ ಜೊತೆಯಲ್ಲಿ ಮಾತನಾಡಿಕೊಂಡು ಬಂದಿದ್ದೇನೆ. ನೀರು ನಿಂತ ದಿವಸ ಜಿಲ್ಲಾಧಿಕಾರಿಗಳು ತೀರ್ಥಹಳ್ಳಿಯಲ್ಲಿ ಹೋಗಿ ನಿಂತಿದ್ದರು. ನಾನು ದೂರವಾಣಿ ಮೂಲಕ ಅವರೊಂದಿಗೆ ಮಾತನಾಡಿದ್ದೇನೆ. ಅಲ್ಲಿ ಜೀವ ಹಾನಿಯಾಗದಂತೆ ಅಲ್ಲಿಯ ರೆವಿನ್ಯೂ ಇಲಾಖೆ, ಪೋಲೀಸ್ ಇಲಾಖೆಯವರು ಎಲ್ಲಾ ರೀತಿಯ ನಿಗಾವಹಿಸಿದ್ದಾರೆ. ಅಷ್ಟರಮಟ್ಟಿಗೆ ನಾನು ಅವರಿಗೆ ಅಭಿನಂದಿಸುತ್ತೇನೆ. ಆದರೆ ಅಲ್ಲಿ ಕೋಟಿಗಟ್ಟಲೆ ಹಾನಿಯಾಗಿದೆ ಆ ಹಾನಿಯನ್ನು ಸರ್ಕಾರದವರು ದಯಮಾಡಿ ತುಂಬಿಕೊಡಬೇಕು. ಹೊಸನಗರ ಮತ್ತು ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಹೆಚ್ಚು ಹಾನಿಯಾಗಿದೆ. ಆದರೆ ಸರ್ಕಾರದವರು ಎರಡು ಲಕ್ಷ ರೂಪಾಯಿಗಳನ್ನು ಮಾತ್ರ ಕಳುಹಿಸಿಕೊಟ್ಟಿದ್ದಾರೆ. ಬೆಳೆ ಹಾನಿಯಾಗಿರತಕ್ಕಂಥದ್ದಕ್ಕೆ ಮಾತ್ರ ತಹಸೀಲ್ದಾರರು ಪರಿಹಾರವನ್ನು ಕೊಡುತ್ತಿದ್ದಾರೆ. ಅಂದರೆ ಒಂದು ಹೆಕ್ಟೇರ್‌ಗೆ 500 ರೂಪಾಯಿಯನ್ನು ಕೊಡುತ್ತಿದ್ದಾರೆ. ಅದು ಕೊಡದೇ ಇದ್ದರೂ ಪರವಾ ಇಲ್ಲ ನಾವು ಸರ್ಕಾರದವರನ್ನು ಬಯ್ಯುವುದಿಲ್ಲ. ಈ ಪ್ರಸಾದವನ್ನು ಕೊಡುವುದಕ್ಕಿಂತ ಸುಮ್ಮನೆ ಇರುವುದು ಒಳ್ಳೆಯದು. ದಯಮಾಡಿ ಸರ್ಕಾರದವರು ರೈತರ ಕಣ್ಣೀರು ಒರೆಸುವಂಥ ಕೆಲಸವನ್ನು ಮಾಡಿ. ಇಂತಹ ಒಂದು ದೈನ್ಯವಾಗಿ ಇರತಕ್ಕಂಥ ಪರಿಸ್ಥಿತಿಯಲ್ಲಿ ಸರ್ಕಾರ ನೆರವಿಗೆ ಬಂದು ಎಲ್ಲಾ ಇಲಾಖೆಗಳಿಗೆ ಹಣ ಬಿಡುಗಡೆ ಮಾಡಿ ಕೆರೆ ಕಟ್ಟೆಗಳನ್ನು ಕಟ್ಟಿ ಸುಭದ್ರ ಮಾಡಿ ಕೊಡಬೇಕು. ಮಲೆನಾಡಿನ ಜನಕ್ಕೆ ಎಂದು ನಾನು ಈ ಸಂದರ್ಭದಲ್ಲಿ ತಮ್ಮ ಮೂಲಕ ಮಾನ್ಯ ಕಂದಾಯ ಸಚಿವರನ್ನು ಸರ್ಕಾರವನ್ನು ವಿನಂತಿ ಮಾಡಿಕೊಂಡು ಸಾಕಷ್ಟು ಹಣವನ್ನು ಬಿಡುಗಡೆ ಮಾಡಿ ಅಲ್ಲಿಯ ಕಷ್ಟವನ್ನು ಪರಿಹಾರ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸೊರಬ) : ಮಾನ್ಯ ಉಪಾಧ್ಯಕ್ಷರೆ, ಒಂದು ದಿವಸ ನಾನು ಇಲ್ಲಿ ವಿಧಾನಸಭೆಯಲ್ಲಿದ್ದಾಗ ಎರಡು ಮೂರು ದಿನದ ಹಿಂದೆ ನಮ್ಮ ತಾಲ್ಲೂಕಿನ ಕೆಲವು ಜನ ಬಂದು ಅಲ್ಲಿಯ ಕೆರೆ ಕಟ್ಟೆಗಳು ಒಡೆದುಹೋಗಿವೆ, ಜನರು ತುಂಬಾ ತೊಂದರೆಯಲ್ಲಿ ಸಿಲುಕಿಕೊಂಡಿದ್ದಾರೆ ತಾವು ಅಲ್ಲಿಯ ಪರಿಸ್ಥಿತಿಯನ್ನು ಕಣ್ಣಾರೆ ನೋಡಬೇಕೆಂದು ದೂರವಾಣಿ ಮಾಡಿ ಹೇಳಿದರು. ನಾನು

ತಕ್ಷಣ ಹೋಗಿ ನೋಡಿದರೆ ಸೊರಬ ತಾಲ್ಲೂಕಿನ ದೊಡ್ಡ ಗ್ರಾಮವಾದ ಬಾಸೂರಿನಲ್ಲಿರುವ ದೊಡ್ಡ ಕೆರೆಯ ಒಡ್ಡು ಒಡೆದು ಸುಮಾರು ನೂರು ನೂರಾಐವತ್ತು ಅಡಿ ಅಲ್ಲಿಂದ ಕಿತ್ತುಕೊಂಡು ಹೋಗಿ ಅದರ ಸುತ್ತಮುತ್ತ ಇರುವ ಸುಮಾರು 250-300 ಎಕರೆ ತೋಟ ಗದ್ದೆ, ಜಮೀನು ಹಾಳಾಗಿವೆ. ಇದರ ಜೊತೆಗೆ ಅಲ್ಲಿಯ ಬಹಳಷ್ಟು ಕೆರೆಗಳು ಒಡೆದು ಹೋಗುವಂಥ ಪರಿಸ್ಥಿತಿಯಲ್ಲಿ ಇವೆ. ಅದರ ಬಗ್ಗೆ ನಮ್ಮ ಅಧಿಕಾರಿಗಳು, ಜಿಲ್ಲಾಧಿಕಾರಿಗಳು ಬೆಂಗಳೂರಿಗೆ ಟೆಲಿಗ್ರಾಮನ್ನು ಕೊಟ್ಟಿದ್ದಾರೆ. ತಾವು ಸೊರಬ ಬಗ್ಗೆ ಕೂಡ ಕಾಳಜಿ ವಹಿಸಬೇಕೆಂದು ಕೋರುತ್ತೇನೆ.

ಶ್ರೀ ಆಯನೂರು ಮಂಜುನಾಥ್ (ಹೊಸನಗರ) : ಹೊಸನಗರ ತಾಲ್ಲೂಕಿನಲ್ಲಿ ಬಾಣಂತಿ ಕೆರೆ, ಶಿವಮೊಗ್ಗ ತಾಲ್ಲೂಕಿನಲ್ಲಿ ಬ್ರಹ್ಮಸಮುದ್ರ ಕೆರೆ, ಈ ತರಹ ಸಣ್ಣಪುಟ್ಟ ಕೆರೆಗಳ ಜೊತೆ ದೊಡ್ಡ ದೊಡ್ಡ ಕೆರೆಗಳು ಕೂಡ ಒಡೆದು ಹೋಗಿದ್ದಾವೆ. ಸಾಮಾನ್ಯ ದಿನಗಳಲ್ಲಿ ಅದರ ಹೂಳು ಎತ್ತುವಂತಹ ಕೆಲಸವನ್ನಾಗಲಿ, ಅಥವಾ ಚಾನೆಲ್ ರಿಪೇರಿ ಮಾಡುವಂತಹ ಕೆಲಸವನ್ನು ಸರ್ಕಾರ ಮಾಡುವುದಿಲ್ಲ. ಅದರ ಬಗ್ಗೆ ನಾವು ಸಾಕಷ್ಟು ವಿನಂತಿ ಮಾಡಿಕೊಂಡರೂ ಕೂಡ ಆ ಕಡೆ ಯಾವುದೇ ಕ್ರಮವನ್ನು ತೆಗೆದುಕೊಳ್ಳುವುದಿಲ್ಲ. ಹೂಳು ತುಂಬಿ ಹೋಗಿರುವಂತಹ ಎಲ್ಲಾ ಕಡೆಗೂ ಇವತ್ತು ಕೆರೆ ತುಂಬಿದ ತಕ್ಷಣ ನೀರು ಕೊಚ್ಚಿಕೊಂಡು ಗ್ರಾಮಗಳ ಮಧ್ಯ, ಗುಡಿಸಲುಗಳ ಮಧ್ಯೆ ನುಗ್ಗುತ್ತಿದೆ. ಎಲ್ಲಾ ಗದ್ದೆಗಳು ಒಡೆದು ಹೋಗಿವೆ. ಈ ಕೂಡಲೇ ಜಿಲ್ಲೆಯ ಬಗ್ಗೆ ವಿಶೇಷ ಕಾಳಜಿ ತೆಗೆದುಕೊಳ್ಳಬೇಕು. ಶಿವಮೊಗ್ಗ ಜಿಲ್ಲೆಯೊಳಗೆ ಒಂದೆರಡು ಹೊರತಾಗಿ ಎಲ್ಲಾ ಕಡೆ ದೊಡ್ಡ ಸಮಸ್ಯೆ ಪ್ರಾರಂಭವಾಗಿದೆ. ಅದಕ್ಕೆ ವಿಶೇಷವಾದಂತಹ ಅನುದಾನಗಳನ್ನು ಬಿಡುಗಡೆ ಮಾಡಬೇಕೆಂದು ಒತ್ತಾಯ ಮಾಡುತ್ತೇನೆ. ಉಳಿದ ಕಡೆಯಲ್ಲಿ ರಸ್ತೆಗಳೆಲ್ಲಾ ಹಾಳಾಗಿವೆ. ಮಲೆನಾಡು ಭಾಗದಲ್ಲಂತೂ ಯಾರೂ ಓಡಾಡುವುದಕ್ಕೆ ಸಾಧ್ಯವಿಲ್ಲ. ಇದರ ಬಗ್ಗೆ ಕೂಡಲೆ ಒಂದು ತನಿಖೆಗೋಸ್ಕರ ಈ ಸಂದರ್ಭದಲ್ಲಿ ಮಾನ್ಯ ಕಂದಾಯ ಮಂತ್ರಿಗಳು ನಮ್ಮ ಜಿಲ್ಲೆಗೆ ಬರಲಿ. ಅವರು ಬರಲೇ ಇಲ್ಲ ಎನ್ನುವಂತಹ ಮಾತನ್ನು ಹೇಳುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ (ಚಿಕ್ಕಮಗಳೂರು) : ಮಾನ್ಯ ಉಪಾಧ್ಯಕ್ಷರೇ, ಚಿಕ್ಕಮಗಳೂರಿನಲ್ಲಿ ಅನೇಕ ನದಿಗಳು ಹುಟ್ಟುತ್ತವೆ. ನಮ್ಮ ನದಿಗಳು ತುಂಬಿದ ನಂತರ ಅವರಿಗೆಲ್ಲಾ ತೊಂದರೆ ಆಗುವಂತಾದ್ದು. ಇರುವಂತಹ ವಿಚಾರ. ಏಕೆಂದರೆ ಹಿರಿಯ ನಾಯಕರಾದಂತಹ ಮಾನ್ಯ ಯಡಿಯೂರಪ್ಪನವರು ಮತ್ತು ವಿರೋಧಪಕ್ಷದ ನಾಯಕರ ಗಮನಕ್ಕೆ ಬರುವಂತಹ ವಿಚಾರ. ಮತ್ತು ತಮ್ಮ ಗಮನಕ್ಕೂ ಬರುವಂತಹ ವಿಚಾರ. ನಮ್ಮಲ್ಲಿ ಹಾನಿಯಾಗಿರುವಂತಹ ವಿಚಾರದ ಬಗ್ಗೆ ಆಗಲೇ ನಾವು ಸಮೀಕ್ಷೆ ವಗೈರೆ ಎಲ್ಲಾ ನಡೆಸಿ, ಜಿಲ್ಲಾ ಉಸ್ತಾವಾರಿ ಸಚಿವರ ಒಂದು ಸಭೆಯನ್ನು ಕರೆಸಿ ಅದರಲ್ಲಿ ನಾವು ಚರ್ಚೆ ನಡೆಸಿದ್ದೇವೆ. ಸರ್ಕಾರ ಇದರ ಬಗ್ಗೆ ಸ್ವಲ್ಪಮಟ್ಟಿಗೆ ಆಸಕ್ತಿ ವಹಿಸಬೇಕಾಗುತ್ತದೆ. ನಮ್ಮ ಮಿತ್ರರಾದ ಆಯನೂರು ಮಂಜುನಾಥ್‌ರವರು ಹೇಳಿದ ಹಾಗೆ ಎಲ್ಲಾ ಕಡೆಗಳಲ್ಲಿ ಕೆರೆ ಹೂಳು ತುಂಬಿಕೊಂಡು ಸ್ವಲ್ಪ ನೀರು ಬಂದಾಗಲೂ ಸಹ ಒಡೆಯುವಂತಾದ್ದು ಸ್ವಾಭಾವಿಕವಾಗಿದೆ. ಎಲ್ಲಾ ಸಂದರ್ಭದಲ್ಲಿ ಸರ್ಕಾರ ನಾವು ಹೂಳು ತೆಗೆಯುವಂತಹ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೇವೆ,

ಅದಕ್ಕೆ ತಕ್ಕಂತೆ ಹಣವನ್ನು ಬಿಡುಗಡೆ ಮಾಡುತ್ತೇವೆಂದು ಹೇಳುತ್ತಾರೆ. ಆದರೆ ಅತೀವೃಷ್ಟಿ ಆಗುವಂತಹ ಸಂದರ್ಭದಲ್ಲಿ ಇದೇ ಒಂದು ಕಾರಣ ಹೇಳುತ್ತಾ ಬರುತ್ತದೆ. ನಮ್ಮ ಜಿಲ್ಲೆಯಲ್ಲಿ 1 ಕೋಟಿ 89 ಲಕ್ಷ ರೂಪಾಯಿ ಅಂದಾಜು ಪಟ್ಟಿಯನ್ನು ತಯಾರು ಮಾಡಿ, ಅದನ್ನು ಆಗಲೇ ನಾವು ಸರ್ಕಾರಕ್ಕೆ ಕಳುಹಿಸಿದ್ದೇವೆ. ಅದರ ಜೊತೆಗೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಅದರಲ್ಲೂ ಉಸ್ತುವಾರಿ ಸಚಿವರ ಕ್ಷೇತ್ರದಲ್ಲಿ ಇಬ್ಬರು ವಿದ್ಯಾರ್ಥಿಗಳು ಹೊಳೆಯಲ್ಲಿ ಕೊಚ್ಚಿಕೊಂಡು ಹೋಗಿ ತೀರಿಕೊಂಡಿದ್ದಾರೆ. ಆ ದೃಷ್ಟಿಯಿಂದ ನಮ್ಮ ಜಿಲ್ಲೆಗೆ ಆಗಿರುವಂತಹ ಅನಾಹುತದ ಬಗ್ಗೆ ನಾವು ಅಂದಾಜು ವೆಚ್ಚ ತಯಾರು ಮಾಡಿ ಕಳುಹಿಸಿದ ನಂತರ ಅದಕ್ಕೆ ರಾಜ್ಯ ಸರ್ಕಾರದವರು 20 ಲಕ್ಷ ರೂಪಾಯಿ ಮಾತ್ರ ಬಿಡುಗಡೆ ಮಾಡಿದ್ದಾರೆ. ಮಾನ್ಯ ಜಿಲ್ಲೆ ಉಸ್ತುವಾರಿ ಸಚಿವರಿಗೆ ಗೊತ್ತಿರುವಂತಹ ವಿಚಾರ. ಮತ್ತು ನಮ್ಮ ಕಂದಾಯ ಮಂತ್ರಿಗಳಿಗೂ ತಿಳಿದಿರುವಂತಹ ವಿಚಾರ. 20 ಲಕ್ಷ ರೂಪಾಯಿಗಳಲ್ಲಿ ಏನೂ ಮಾಡುವುದಕ್ಕೂ ಸಾಧ್ಯವಾಗುವುದಿಲ್ಲ. ಆದುದರಿಂದ ಸರ್ಕಾರ ಮಲೆನಾಡು ಭಾಗದ ಜಿಲ್ಲೆಗಳ ಬಗ್ಗೆ, ಏಕೆಂದರೆ ರಾಜ್ಯದಲ್ಲಿ ಮುಕ್ಕಾಲು ಭಾಗ, ಅದರಲ್ಲೂ ಅನೇಕ ಜಿಲ್ಲೆಗಳಲ್ಲಿ ಉತ್ತಮವಾಗಿ ಮಳೆಯಾಗಿರುವುದರ ಜೊತೆಗ ಉತ್ತಮ ಪೈರು ಬೆಳೆಯುವಂತಹ ಈ ಸಂದರ್ಭದಲ್ಲಿ ಮಲೆನಾಡು ಭಾಗದ ಜನರಿಗೆ ಈ ಅನುಕೂಲ ಆಗುವಂತಹ ರೀತಿಯಲ್ಲಿ ಸರ್ಕಾರದವರು ಪರಿಹಾರಕ್ಕಾಗಿ ಹೆಚ್ಚಿಗೆ ಸಹಾಯಧನ ನೀಡಬೇಕೆಂದು ತಮ್ಮ ಮುಖಾಂತರ ಅವರನ್ನು ಒತ್ತಾಯಿಸುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಉಪಾಧ್ಯಕ್ಷರೇ, ಅತೀವೃಷ್ಟಿಯಿಂದ ಆಗತಕ್ಕಂಥ ಅಪಾಯದ ಬಗ್ಗೆ ನಮ್ಮ ಮಾನ್ಯ ಮಿತ್ರರು ಬಹಳ ಮಾತನಾಡಿದರು. ಒಂದು ಹೆಕ್ಟೇರ್‌ಗೆ 500 ರೂಪಾಯಿ, ಒಂದು ಬಾಳೆಗೊನೆ ಮುರಿದು ಹೋದರೆ 1.50 ರೂಪಾಯಿ ಪರಿಹಾರ. ಇವತ್ತು ಒಂದು ಬಾಳೆ ಹಣ್ಣಿಗೆ 1.50 ಪೈಸೆ ಇದೆ. ಇಲ್ಲಿ ಒಂದು ಗೊನೆ ನಷ್ಟವಾದರೆ 1.50 ಪೈಸೆ ಇದೆ. ತಾವು ಮಾತನಾಡಬೇಕಾದರೆ ಹೇಳಿದಿರಿ, ಯಾವ ವೈಜ್ಞಾನಿಕ ಅಳತೆಗೋಲಿನಿಂದ ಅತೀವೃಷ್ಟಿ ಪ್ರಕೃತಿ ವಿಕೋಪಕ್ಕೆ ಸಿಕ್ಕಿ ಕೃಷಿಕ್ಷೇತ್ರದಲ್ಲಿ ನಷ್ಟವಾಗತಕ್ಕಂಥ ರೈತರಿಗೆ ವೈಜ್ಞಾನಿಕ ಬೆಲೆ ನಿಗದಿ ಮಾಡಿ ಎಂದು ಯಾವ ಬೃಹಸ್ಪತಿ ಈ ತಿಳುವಳಿಕೆ ಕೊಟ್ಟ, ಅವನ ಹೆಸರನ್ನು ದಯವಿಟ್ಟು ತಾವು ಹೇಳಬೇಕು.

ಶ್ರೀ ವಿ.ಎಸ್. ಕೌಜಲಗಿ (ಅರಭಾವಿ) : ಮಾನ್ಯ ಉಪಾಧ್ಯಕ್ಷರೇ, ಬೆಳಗಾವಿ ಜಿಲ್ಲೆಯಲ್ಲಿ ಸುಮಾರು ಐದು ಮುಖ್ಯವಾದ ನದಿಗಳು ಪಶ್ಚಿಮ ಘಟ್ಟದಲ್ಲಿ ಹುಟ್ಟಿ ಪೂರ್ವಾಭಿಮುಖವಾಗಿ ಹರಿಯುತ್ತವೆ. ಪಶ್ಚಿಮ ಘಟ್ಟದಲ್ಲಿ ಜಾಸ್ತಿ ಮಳೆ. ಬರಗಾಲ ಪೀಡಿತ ಪ್ರದೇಶವಾದಂತಹ ಹಳ್ಳಿಗಳು ಗೋಕಾಕ್ ಮತ್ತು ಗೋಕಾಕ್ ತಾಲ್ಲೂಕಿನಲ್ಲಿ ಇದ್ದಂತಹ 20-25 ಹಳ್ಳಿಗಳಿಗೆ ನೀರು ಸುತ್ತುವರೆದು ಸುಮಾರು 15 ದಿವಸಗಳಿಂದ ಜನರು ಅಲ್ಲಲ್ಲೇ ಇರುವಂತಹ ಪರಿಸ್ಥಿತಿ ಆಗಿಬಿಟ್ಟಿದೆ. ಆದರೆ ಅಧಿಕಾರಿಗಳ ಒಂದು ಮುಂಜಾಗ್ರತಾ ಕ್ರಮದಿಂದ ಜೀವಹಾನಿಯಾಗಿಲ್ಲ. ಆದರೆ ಭಾರಿ ಪ್ರಮಾಣದಲ್ಲಿ ಮನೆಗಳು ಮತ್ತು ಬೆಳೆಗಳು ನಾಶವಾಗಿದೆ. ನಮ್ಮಲ್ಲಿ ಪ್ರಮುಖವಾದ ಬೆಳೆ ಹತ್ತಿ ಮತ್ತು ಕಬ್ಬು. ಅದು ಸಂಪೂರ್ಣವಾಗಿ ನಾಶವಾಗಿದೆ. ಇದರಿಂದ ಕೋಟ್ಯಾಂತರ ರೂಪಾಯಿ ಲುಕ್ಸಾನಾಗಿದೆ. ನಾನು ಮಾನ್ಯ ಸಚಿವರಿಗೆ ಏನೊಂದು ಸಲಹೆ ಮಾಡುತ್ತೇವೆಂದರೆ ಬೆಳೆಗಳು ಏನು ಲುಕ್ಸಾನು ಆಗಿದೆ ಅದನ್ನು ರೈತರಿಗೆ ಕೊಡಬೇಕು. ಮತ್ತು ಯಾರಿಗೆ ಮನೆಗಳನ್ನು ಆಶ್ರಯ ಯೋಜನೆಯಲ್ಲಿ ಕೊಡುವುದಕ್ಕೆ ಸಾಧ್ಯವಿಲ್ಲ, ಅವರಿಗೆ ತಾವು ಹುಡ್ಕೋದಿಂದ ಏನಾದರೂ ಸಾಲ ಮಂಜೂರು ಮಾಡಿಸಿ ಅವರಿಗೆ ಮನೆಗಳನ್ನು

ಕಟ್ಟಿಸಿಕೊಡುವಂತಹ ವ್ಯವಸ್ಥೆಯನ್ನು ಮಾಡಿ ಎಂದು ಹೇಳಿ ಸುಮಾರು ಎರಡು ವರ್ಷದಿಂದ ನಿಮ್ಮ ಸರ್ಕಾರಕ್ಕೆ ಪತ್ರ ಬರೆಯುತ್ತಿದ್ದೇನೆ. ಆದರೆ ಅದು ಏನಾಗುತ್ತಿದೆ ಎಂಬುದು ಗೊತ್ತಾಗುತ್ತಿಲ್ಲ. ಅದಕ್ಕೆ ತಾವು ಅದನ್ನು ಪರಿಶೀಲನೆ ಮಾಡಿ, ಆ ಜನರಿಗೆ ಯೋಗ್ಯವಾದ, ಪುನರ್‌ವಸತಿ ವ್ಯವಸ್ಥೆಯನ್ನು ಮಾಡಬೇಕೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಉಪಾಧ್ಯಕ್ಷರೇ, ಹಿರಿಯ ಸದಸ್ಯರಾದ ಮಾನ್ಯ ಯಡಿಯೂರಪ್ಪನವರು, ಶಿಕಾರಿಪುರದಲ್ಲಿ ಅತ್ಯಧಿಕ ಮಳೆಯಾಗಿ ಅಲ್ಲಿ ಜನರ ಸಾರ್ವಜನಿಕರ ಆಸ್ತಿ ಮತ್ತು ಸರ್ಕಾರದ ಆಸ್ತಿಪಾಸ್ತಿಗಳಿಗೆ ಬಹಳ ತೊಂದರೆಯಾಗಿದೆ ಎಂದು ಹೇಳಿ ನನ್ನ ಗಮನಕ್ಕೆ ತಂದಿದ್ದಾರೆ ಹಾಗೂ ಪತ್ರವನ್ನು ಬರೆದಿದ್ದಾರೆ ಮತ್ತು ನಮ್ಮ ಅಧಿಕಾರಿಗಳು ಒಂದು ವರದಿಯನ್ನೂ ಕೂಡ ನನಗೆ ಕಳುಹಿಸಿದ್ದಾರೆ. ಅದಕ್ಕೆ ನಾನು ಪುನಃ ನಾಳೆ ಒಂದು ಸಂಪೂರ್ಣವಾದ ವರದಿಯನ್ನು ತರಿಸಿಕೊಂಡು ಅಲ್ಲಿ ಅತೀವೃಷ್ಟಿಯಿಂದ ಏನೇನು ಸಾರ್ವಜನಿಕರಿಗೆ ತೊಂದರೆಯಾಗಿದೆ, ಅಲ್ಲಿ ಒಂದು ಹಳ್ಳಿಗೆ ಹೋಗಬೇಕೆಂದರೆ ರೋಡ್ ಇಲ್ಲ, ರೋಡ್ ಕಟ್ ಆಗಿದೆ, ಅದರ ಬಗ್ಗೆ ಎಲ್ಲಾ ವರದಿ ತರಿಸಿ, ನಾಳೆ ಅಥವಾ ನಾಡಿದ್ದು ಅಲ್ಲಿ ಒಂದು ಇಲಾಖೆಯಲ್ಲಿ ಅದು ಜಿಲ್ಲಾ ಪಂಚಾಯತ್ ಆಗಿರಬಹುದು ಅಥವಾ ನನ್ನ ಇಲಾಖೆಯಿಂದ ಎಷ್ಟು ಸಾಧ್ಯವಿದೆಯೋ ಅಷ್ಟು ನಾವು ಸರ್ಕಾರದ ವತಿಯಿಂದ ಎಲ್ಲಾ ಕೆಲಸಗಳನ್ನು ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಕೆಲಸವನ್ನು ನಾವು ಮಾಡುತ್ತೇವೆ ಎಂದು ಈ ಸಂದರ್ಭದಲ್ಲಿ ಸರ್ಕಾರದ ಪರವಾಗಿ ಹೇಳಿ, ನಂತರ ಬೆಳಗಾವಿ ಜಿಲ್ಲೆಯಲ್ಲಿ ಕೂಡ ತೊಂದರೆಯಾಗಿದೆಯೆಂದು ಹೇಳಿದ್ದಾರೆ. ಮಾನ್ಯ ಸದಸ್ಯರಾದ ಕೌಜಲಗಿಯವರಿಗೆ ಮನವಿ ಮಾಡಿಕೊಳ್ಳುತ್ತೇನೆ. ಅವರು ನಾಳೆ ನನ್ನ ಹತ್ತಿರ ಬರಲಿ, ಬೆಳಗಾವಿ ಜಿಲ್ಲೆಯಲ್ಲಿ ಮತ್ತು ಗೋಕಾಕ್ ತಾಲ್ಲೂಕಿಗೆ ಏನೇನು ತೊಂದರೆಯಾಗಿದೆ ಎಂದು ಹೇಳಲಿ, ಅವರ ಸಮಸ್ಯೆಯನ್ನು ಕೂಡ ಬಗೆಹರಿಸುತ್ತೇವೆ.

ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಉಪಾಧ್ಯಕ್ಷರೇ, ಅತೀವೃಷ್ಟಿಯಿಂದ ಒಂದು ತಾಲ್ಲೂಕು ಅಥವಾ ಎರಡು ತಾಲ್ಲೂಕು ಆಗಿರಬಹುದು. ನನ್ನ ತಾಲ್ಲೂಕು ಅಥವಾ ಯಾವುದೇ ತಾಲ್ಲೂಕು ಹಾನಿಯಾಗಿರಬಹುದು. ದಕ್ಷಿಣ ಕನ್ನಡ ಜಿಲ್ಲೆಗೆ ಪ್ರಾರಂಭದಲ್ಲಿ ಅದರ ಜೊತೆಗೆ ನಮ್ಮ ಚಿಕ್ಕಮಗಳೂರು ಜಿಲ್ಲೆಯಲ್ಲಿ ಆಯಿತು. ಅಲ್ಲಿಗೆ ಸಾಕಷ್ಟು ಹಣವನ್ನು ಬಿಡುಗಡೆ ಮಾಡಿದ್ದೇವೆ ಎಂದು ಸರ್ಕಾರದ ಪ್ರಕಟಣೆಯಲ್ಲಿ ಬಂತೇ ವಿನಹ ಅಲ್ಲಿಗೆ ಹಣ ಹೋಗಿಲ್ಲವೆಂದು ಬೇರೆ ಕಡೆಯಿಂದ ನಮಗೆ ಸುದ್ದಿ ಬಂದಿದೆ. ಮಾನ್ಯ ಯಡಿಯೂರಪ್ಪನವರು ಹೇಳುವಂತಹ ರೀತಿಯಲ್ಲಿ 6-7ನೇ ತಾರೀಖಿನ ದಿವಸ ಅನಿರೀಕ್ಷಿತವಾಗಿ ಹಣ ಬಾರದೆ ಇರತಕ್ಕಂಥ ಸಂದರ್ಭದಲ್ಲಿ, ಎಲ್ಲಾ ಕಡೆ ಮಳೆ ಬಂದು ಅಪಾರ ಹಾನಿ ಮಲೆನಾಡು ಪ್ರದೇಶದಲ್ಲಿ ಆಗಿದೆ. ಅದಕ್ಕೆ ದಯವಿಟ್ಟು ಸರ್ಕಾರದಿಂದ ಆ ಬಗ್ಗೆ ಆದಂತಹ ಅಸಲು ಏನು ನಷ್ಟವಾಗಿದೆ, ಸಾರ್ವಜನಿಕರ ಆಸ್ತಿಪಾಸ್ತಿಗೆ ಎಷ್ಟು ನಷ್ಟವಾಗಿದೆ ಮತ್ತು ಮನೆ ಮಠಗಳು ಎಷ್ಟು ಹೋಗಿದೆ ಎಂದು ಈ ಸದನದ ಮುಂದೆ ಒಂದು ಪಟ್ಟಿ ಮಾಡಿ ಹೇಳಲಿ. ಆದುಬಿಟ್ಟು ನೀವು ನನ್ನ ಚೇಂಬರ್‌ಗೆ ಬನ್ನಿ ಅಲ್ಲಿಗೆ ಬನ್ನಿ. ಇದೆಲ್ಲಾ ಬೇಡ. ಒಟ್ಟಾರೆ ರಾಜ್ಯದಲ್ಲಿ ಅತಿವೃಷ್ಟಿಯಿಂದ ಆಗಿರತಕ್ಕಂಥ ಅನಾಹುತಗಳಿಗೆ ಒಂದು ವರದಿಯನ್ನು ದಯವಿಟ್ಟು ಇಡಿ. ಒಂದು ವೇಳೆ ನಿಮ್ಮ ವರದಿಯಲ್ಲಿ ಯಾವುದಾದರೂ ಪ್ರಸ್ತಾಪ ಆಗದೇ ಹೋಗಿದ್ದರೆ ಆಗ ನಾವು ತಮ್ಮ ಗಮನಕ್ಕೆ ತರುವುದಕ್ಕಾಗುತ್ತದೆ.

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಉಪಾಧ್ಯಕ್ಷರೇ, ತತ್‌ಕ್ಷಣ ಶಿವಮೊಗ್ಗ ಜಿಲ್ಲೆಗೆ ಈಗ ನೀವು ಡಿ.ಸಿ.ಯವರಿಗೆ ಹೇಳಿ ಎರಡು ಕೋಟಿ ರೂಪಾಯಿ ಬಿಡುಗಡೆ ಮಾಡಿ, ಕೆರೆ, ಗದ್ದೆಗಳಿಗೆ ಪರಿಹಾರ ಕೊಡಬೇಕು. ಕೆರೆಗಳನ್ನು ರಿಪೇರಿ ಮಾಡು ಎಂದರೆ ದುಡ್ಡು ಇಲ್ಲದೇ ಇದ್ದರೆ ಜಿಲ್ಲಾ ಪರಿಷತ್ತು ಎಂಜಿನಿಯರ್ ಪಿಡಬ್ಲ್ಯೂಡಿ ಎಂಜಿನಿಯರ್ ಏನು ಮಾಡುತ್ತಾರೆ? ಡಿ.ಸಿ. ಹತ್ತಿರ ಹೋದರೆ ದುಡ್ಡು ಇಲ್ಲ ಎಂದು ಹೇಳುತ್ತಾರೆ. ನಾವು ಇಲ್ಲಿ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ನಾವು ಇಲ್ಲಿ ಶೂನ್ಯ ವೇಳೆಯಲ್ಲಿ ಎತ್ತುವಂಥಾದ್ದು ಗಂಭೀರವಾದಂತಹ ವಿಷಯ ಇದ್ದಾಗ, ನಾವು ಅಂಕಿ ಅಂಶ ಕೊಟ್ಟಿದ್ದೇವೆ ಅದಕ್ಕೆ ತಾವು ಒಪ್ಪಿದ್ದೀರಿ. ಅದಕ್ಕೆ ಯಡಿಯೂರಪ್ಪನವರೇ ನಾಳೆ ಅದಕ್ಕೆ ಅಗತ್ಯ ಇರುವಂತಹ ಹಣವನ್ನು ಬಿಡುಗಡೆ ಮಾಡುತ್ತಿದ್ದೇವೆ, ಕೆರೆಗ ಮಣ್ಣು ಚೀಲಗಳನ್ನು ಹಾಕಿ ಮರಳು ತುಂಬಿ ಬಂದೋಬಸ್ತು ಮಾಡಿ ಕೆರೆ ಉಳಿಸಿಕೊಡುತ್ತೇವೆ, ರಸ್ತೆ ರಿಪೇರಿ ಕೆಲಸ ಶುರು ಮಾಡುತ್ತೇವೆ, ವಾಹನ ಸಂಚಾರ ನಿಂತಿರುವುದನ್ನು ಸರಿ ಮಾಡುತ್ತೇವೆಂದು ಹೇಳದೇ ನೀವು 2-4 5 ಲಕ್ಷ ರೂಪಾಯಿಯನ್ನು ಭಿಕ್ಷೆಯಂತೆ ಕೊಡುವುದು ಬಿಟ್ಟು ಇನ್ನು ಏನಾದರೂ ಮಾಡು ಎಂದರೆ ನಾವು ಶಾಸಕನಾಗಿ ಅಲ್ಲಿ ಮುಖ ತೋರಿಸುವುದಕ್ಕೆ ಆಗುತ್ತದೆಯೇ? ಅದು ಯಾವುದೇ ಜಿಲ್ಲೆಯಾಗಿರಬಹುದು. ಅದು ಶಿಕಾರಿಪುರ ಇರಬಹುದು, ಚಿಕ್ಕಮಗಳೂರು ಇರಬಹುದು. ಈ ಸಮಯದಲ್ಲಿ ಸರ್ಕಾರ ಜನರ ಸಂಕಷ್ಟಕ್ಕೆ ಸ್ಪಂದಿಸುವುದಿಲ್ಲವೆಂದರೆ ಸರ್ಕಾರ ಇದ್ದರೆ ಏನು, ನಾವು ಶಾಸಕನಾಗಿ ಕುಳಿತುಕೊಂಡು ಏನು ಅನುಕೂಲವಾಗುತ್ತದೆ.

ಶ್ರೀ ಕಾಗೋಡು ತಿಮ್ಮಪ್ಪ : ಮಾನ್ಯ ಉಪಾಧ್ಯಕ್ಷರೇ, ಕೆರೆಗಳು ಒಡೆದು ಹೋಗಿರುವಂತಹ ಸಂದರ್ಭ ಉಂಟು ರಸ್ತೆಗಳು ಕೊಚ್ಚಿ ಹೋಗಿರುವುದು ಉಂಟು. ಅರಗ ಜ್ಞಾನೇಂದ್ರರವರು ಹೇಳಿದ ರೀತಿಯಲ್ಲಿ ನಾವು ಶಿವಮೊಗ್ಗಕ್ಕೆ ಹೋಗುವಾಗ ಮಧ್ಯದಲ್ಲಿ ಮಂಡಗದ್ದೆ ಎನ್ನುವ ಊರಿನಲ್ಲಿ 7- 8 ಅಡಿ ಉದ್ದ ನೀರು ನಿಂತಿದೆ, ಇಡೀ ತಾಲ್ಲೂಕಿಗೆ ಹೋಗುವುದಕ್ಕೆ ಆಗದೇ ಇರುವಂತಹ ಪರಿಸ್ಥಿತಿ ಇದ್ದು ನಮ್ಮ ವರದಾ ನದಿ ಭಾಗದಲ್ಲಿ ಸಾಗರದಿಂದ ಪ್ರಾರಂಭವಾಗಿ ಸೊರಬ ತಾಲ್ಲೂಕಿನ ಎರಡು ಕಡೆ ಕೂಡ ಅಪಾರವಾದಂಥ ಹಾನಿಯಾಗಿದೆ. ಇದಕ್ಕೆ ಶಾಶ್ವತವಾದಂತಹ ಪರಿಹಾರ ಒಂದು ಕಡೆಯಾದರೆ, ತತ್‌ಕ್ಷಣ ಪರಿಹಾರಕ್ಕೆ ಅವರು ಹೇಳಿದ ರೀತಿಯಲ್ಲಿ, ಇನ್ನೂ ಈಗ ಮಳೆ ಬರುವ ಸಂಭವವಿದೆ. ಎಲ್ಲೆಲ್ಲಿ ಕೆರೆಗಳು ಒಡೆದು ಹೋಗಿದೆ ಅಲ್ಲಿ ತತ್‌ಕ್ಷಣ ರೆಸ್ಟೋರೇಷನ್ ಮಾಡಿದರೆ ಮುಂದೆ ಬರತಕ್ಕಂಥ ಮಳೆ ನೀರನ್ನು ನಿಲ್ಲಿಸುವುದಕ್ಕೆ ಆಗುತ್ತದೆ. ಎಲ್ಲೆಲ್ಲೂ ಇವತ್ತು ರಸ್ತೆಗಳು ಅನಾಹುತಕ್ಕೆ ಒಳಗಾಗಿ ಸಾರಿಗೆ ಸಂಪರ್ಕ ಕಡಿದು ಹೋಗಿದೆ. ಅವುಗಳನ್ನು ದುರಸ್ತಿ ಪಡಿಸುವುದಕ್ಕೆ ಜಿಲ್ಲಾ ಕೇಂದ್ರಗಳಲ್ಲಿ ಹಣ ಇಲ್ಲ. ಅವರು ಇಲ್ಲಿ ಸೂಚನೆ ಕೊಟ್ಟರೆ ಜಿಲ್ಲಾಧಿಕಾರಿಗಳು ಹಣ ಕೊಡುವುದಕ್ಕೆ ಆಗುವುದಿಲ್ಲ. ಹಣ ಕೊಡದೆ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ಹಿರೇನಲ್ಲೂರು ಎಂದರೆ ನಮ್ಮ ಊರು. ಇದು ಎರಡನೇ ಬಾರಿ ನೀರು ಬಂದು ಕೊಚ್ಚಿ ಹೋಗುತ್ತಿದೆ. ಸುತ್ತಮುತ್ತ 7-8 ಗ್ರಾಮದ ಸುಮಾರು ಎರಡು ಸಾವಿರ ಎಕರೆ ಜಮೀನು ವರದಾ ನದಿ ಪ್ರವಾಹದಿಂದ ಎರಡನೇ ಬಾರಿ ನೆರೆ ಹಾವಳಿಗೆ ತುತ್ತಾಗಿ ಇವತ್ತು ಸಂಪೂರ್ಣವಾಗಿ ನಷ್ಟವಾಗಿದೆ.

5.50 ಪಿ.ಎಂ.

ಇನ್ನು ನಮಗೆ ಕೆಲವು ಮಳೆಗಳು ಬೀಳುವಂಥದ್ದು ಇದೆ. ಆ ಸನ್ನಿವೇಶ ಉಪಯೋಗಿಸಿಕೊಂಡು ನಾಟಿ ಮಾಡುವಂತಹದಕ್ಕೆ, ಅಲ್ಲೆಲ್ಲಾ ಭಿತ್ತನೆ ಮಾಡತಕ್ಕಂಥ ಪ್ರದೇಶವಾಗಿದ್ದು ಕೊನೆ ಘಳಿಗೆಯಲ್ಲಿ ನಾಟಿ ಮಾಡುವುದಕ್ಕೆ ಅನುಕೂಲವಾಗುತ್ತದೆ. ಹಿಂದೆ ಇಂತಹ ಸಂದರ್ಭದಲ್ಲಿ ನಾವು ಸರ್ಕಾರದಿಂದ ಬಿತ್ತನೆ ಬೀಜ ಕೊಡಿಸಿದ್ದೆವು, ಗೊಬ್ಬರ ಕೊಡಿಸಿದ್ದೆವು, ಸ್ವಲ್ಪ ಹಣ ಎಲ್ಲಾ ಕೊಟ್ಟಿದ್ದೆವು. ಆ ದೃಷ್ಟಿಯಿಂದ ಮಾನ್ಯ ಸಚಿವರು ದಯವಿಟ್ಟು ಎಲ್ಲಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಂದ ವರದಿಯನ್ನು ತರಿಸಿಕೊಂಡು ಎಲ್ಲೆಲ್ಲಿ ತತ್‌ಕ್ಷಣದ ಪರಿಹಾರ ಕಾರ್ಯಕ್ರಮಗಳನ್ನು ಮಾಡಬೇಕೋ ಅದನ್ನು ಮಾಡುವ ಬಗ್ಗೆ ಸ್ಪಷ್ಟವಾದ ಅಭಿಪ್ರಾಯವನ್ನು ಸದನದಲ್ಲಿ ಮಂಡಿಸಿ, ಸುಮ್ಮನೆ ಎರಡು ಕಾಗದ ಹಾಳೆ ಇಟ್ಟುಕೊಂಡು ಅದು ಇದು ಹೇಳುವುದಕ್ಕೆ ಹೋಗಬೇಡಿ.

ಉಪಾಧ್ಯಕ್ಷರು : ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ ಪ್ರಕಾರ ನಮ್ಮ ಕ್ಷೇತ್ರದಲ್ಲೂ ಸಹ ಕೆರೆ ಒಡೆದು ಜಮೀನಿನ ಮೇಲೆ ಮಣ್ಣು ಕಲ್ಲು ಹೋಗಿ ಬಿದ್ದುಬಿಟ್ಟಿದೆ. ಅವರಿಗೆ ಇರುವಂತದ್ದು ಎರಡು ಎಕರೆ ನಾಲ್ಕು ಎಕರೆ ಜಮೀನು. ಆ ಮಣ್ಣುಕಲ್ಲನ್ನು ತೆಗೆಯುವಂತಹದಕ್ಕೆ ಜಿಲ್ಲಾಧಿಕಾರಿಗಳು ನಮಗೆ ಯಾವುದೇ ಅಧಿಕಾರ ಇಲ್ಲ ಎಂದು ಹೇಳುತ್ತಾರೆ. ಅವರು ಹೇಳುವುದು ಸತ್ಯ ಇದ್ದದ್ದೇ ಆದರೆ ಅದಕ್ಕೆ ವಿಶೇಷವಾದ ಅನುದಾನವನ್ನು ಬಿಡುಗಡೆ ಮಾಡಿ ಸಣ್ಣ ರೈತರಿಗೆ ಏನು ತೊಂದರೆಯಾಗಿದೆ ಅದಕ್ಕೆ ಪರಿಹಾರವನ್ನು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಉಪಾಧ್ಯಕ್ಷರೆ, ಶೂನ್ಯವೇಳೆಯಲ್ಲಿ ಈ ಸದನದ ಸದಸ್ಯರು ನನ್ನ ಗಮನಕ್ಕೆ ತಂದಿದ್ದಾರೆ. ಆದರೂ ಸೌಜನ್ಯಕ್ಕೋಸ್ಕರ, ಜನರಿಗೆ ತೊಂದರೆಯಾಗಿದೆ ಎಂದು ಕಾರ್ಯಕ್ರಮವನ್ನು ಮಾಡುತ್ತೇನೆ ಎಂದು ಹೇಳಿದರೆ, ಕಾಗೋಡು ತಿಮ್ಮಪ್ಪನವರು ಮಂತ್ರಿಯಾಗಿ ಈ ಸದನದಲ್ಲಿ ಕೆಲಸ ಮಾಡಿದವರು ಇದ್ದಾರೆ. ಶೂನ್ಯವೇಳೆಯಲ್ಲಿ ಪ್ರಸ್ತಾಪವಾದ ತಕ್ಷಣ, ಇದಕ್ಕೆ ಉತ್ತರ ಹೇಳುವುದಕ್ಕಾಗುತ್ತದೆಯೇ?

ಶ್ರೀ ಬಿ.ಎಸ್. ಯಡಿಯೂರಪ್ಪ : ಶೂನ್ಯವೇಳೆ ಎಂದರೇನು?....

(ಗೊಂದಲ)

ಶ್ರೀ ರಮೇಶ್ ಸಿ. ಜಿಗಜಿಣಗಿ : ಮಾನ್ಯ ಉಪಾಧ್ಯಕ್ಷರೆ, ತಾವು ಅಪ್ಪಣೆಯನ್ನು ಕೊಟ್ಟರೆ ನಾಳೆ ಸಂಜೆಯೊಳಗೆ ಇಡೀ ರಾಜ್ಯದಲ್ಲಿ ಯಾವ ಯಾವ ಜಿಲ್ಲೆಯಲ್ಲಿ ಅತ್ಯಂತ ಹೆಚ್ಚು ಮಳೆಯಾಗಿ ತೊಂದರೆಯಾಗಿದೆ, ಶಿಕಾರಿಪುರದಲ್ಲಿ ಎಷ್ಟು ತೊಂದರೆಯಾಗಿದೆ, ಶಿವಮೊಗ್ಗದಲ್ಲಿ ಎಷ್ಟು ತೊಂದರೆಯಾಗಿದೆ, ಬೆಳಗಾಂನಲ್ಲಿ ಎಷ್ಟು ತೊಂದರೆಯಾಗಿದೆ, ಸವದತ್ತಿಯಲ್ಲಿ ಎಷ್ಟು ತೊಂದರೆಯಾಗಿದೆ, ಬಿಜಾಪುರದಲ್ಲಿ ಎಷ್ಟು ತೊಂದರೆಯಾಗಿದೆ ಎಂಬ ಬಗ್ಗೆ ಸಂಪೂರ್ಣ ವರದಿಯನ್ನು ನಾಳೆ ಈ ಸದನಕ್ಕೆ ಒಪ್ಪಿಸುತ್ತೇನೆ.

ಉಪಾಧ್ಯಕ್ಷರು : ನಾಳೆ ಸಂಜೆಯೊಳಗೆ ವಿವರವಾದ ವರದಿಯನ್ನು ಸಲ್ಲಿಸುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಬಿ.ಬಿ. ಶಿವಣ್ಣ : ತಾವು ಈ ವಿಷಯದ ಬಗ್ಗೆ ಸಮಯವನ್ನು ನಿಗದಿಪಡಿಸಿದರೆ ಇನ್ನೂ 15 ನಿಮಿಷಗಳ ಕಾಲ ಚರ್ಚೆ ಮಾಡಬಹುದು.

ಶ್ರೀ ರಮೇಶ್ ಸಿ. ಜಿಗಜಿಣಗಿ : ಉಪಾಧ್ಯಕ್ಷರೆ, ಪುಟ್ಟಣ್ಣಯ್ಯನವರು ಹೇಳಿದರು, ಒಂದು ಎಕರೆ ಲುಕ್ಸಾನಾದರೆ ಬರೀ ಐದುನೂರು ರೂಪಾಯಿ ಕೊಡುತ್ತೀರಿ, ಇದನ್ನು ಯಾವರೀತಿ ಸೈದ್ಧಾಂತಿಕವಾಗಿ ನಿಗದಿ ಮಾಡಿದ್ದೀರಿ ಎಂದು ಹೇಳಿದ್ದಾರೆ. ಈ ಮನೆಯಲ್ಲಿ ನಾನು ಪದೇ ಪದೇ ಹೇಳಿದ್ದೇನೆ. ಇದು ರಾಜ್ಯ ಸರ್ಕಾರಕ್ಕೆ ಇರುವಂತ ಅಧಿಕಾರವಲ್ಲ, ಕೇಂದ್ರ ಸರ್ಕಾರದವರು ಈ ನ್ಯಾಚುರಲ್ ಕಲಾಮಿಟಿಗೆ ಎಷ್ಟು ಕೊಡಬೇಕೆಂದು ಫಿಕ್ಸ್ ಮಾಡಿರುತ್ತಾರೆ.

(ಅಧ್ಯಕ್ಷರು ಶ್ರೀ ರಮೇಶ್ ಕುಮಾರ್‌ರವರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು)

ಈಗಾಗಲೇ ನಾನು ಕೇಂದ್ರಸರ್ಕಾರಕ್ಕೆ ಪತ್ರವನ್ನು ಬರೆದಿದ್ದು, ಇದನ್ನು ಹೆಚ್ಚು ಮಾಡಬೇಕೆಂದು ಇನ್ನೂ ಒಂದು ಸಲ ಅವರಿಗೆ ನಾನು ಪತ್ರ ಬರೆಯುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಪತ್ರ ಬರೆಯತಕ್ಕಂಥ ಅವಶ್ಯಕತೆ ಇಲ್ಲ. ಅದನ್ನು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ನೀವು ಸೇರಿ ನಾರ್ಮ್ಸ್ ಛೇಂಜ್ ಮಾಡಿಕೊಂಡು, ಇದಕ್ಕೆ ಕಾಂಪನ್ಸೇಷನ್ ಹೆಚ್ಚು ಮಾಡಬೇಕೋ ಬಿಡಬೇಕೋ ಎನ್ನತಕ್ಕಂಥದ್ದು ನಿಮ್ಮ ಅಧೀನದಲ್ಲಿ ಇರತಕ್ಕಂಥದ್ದು. ಕೇಂದ್ರ ಸರ್ಕಾರದವರು ಫಿಕ್ಸ್ ಅಮೌಂಟನ್ನು ಕೊಡುತ್ತಾರೆ, 33 ಕೋಟಿಯೋ ಎಷ್ಟೋ ಈಗ ಇರಬೇಕು. ಆ ಹಣ ಹೆಚ್ಚಿಗೆ ಆಗುವುದಿಲ್ಲ. ಬೇಕಾದರೆ ನಿಮಗೆ ಅಡ್ವಾನ್ಸ್ ಕೊಡಬಹುದು, ಸಹಾಯ ಮಾಡಬಹುದು, ಆ ಮಾತು ಬೇರೆ. ಆದ್ದರಿಂದ ಇಲ್ಲಿ ಪ್ರತಿ ಎಕರೆಗೆ ಎಷ್ಟು ಕೊಡಬೇಕು ಅಥವಾ ಜೀವ ಹಾನಿ ಆದರೆ ಎಷ್ಟು ಕೊಡಬೇಕು, ಈಗ ಗೈಡ್‌ಲೈನ್ಸನ್ನು ನಾವು ಮಾಡಿಕೊಂಡಿದ್ದು, ಆ ಗೈಡ್‌ಲೈನ್ಸನ್ನು ಫೈನಾನ್ಸ್ ಡಿಪಾರ್ಟ್‌ಮೆಂಟ್ ಜೊತೆಗೆ ಚರ್ಚೆ ಮಾಡಿ ಬದಲಾವಣೆ ಮಾಡಿಕೊಳ್ಳತಕ್ಕಂಥದ್ದು ನಮ್ಮ ಅಧೀನದಲ್ಲಿದೆ. ಅದನ್ನು ಎಷ್ಟರಮಟ್ಟಿಗೆ ಮಾಡಬೇಕು ಬಿಡಬೇಕು ಎಂಬುದು ನಿಮಗೆ ಸೇರಿದ್ದು. ಅದನ್ನು ಕೇಂದ್ರ ಸರ್ಕಾರದ ಮೇಲೆಹಾಕಿ ಮಾಡುವುದಕ್ಕಾಗುವುದಿಲ್ಲ. ಎರಡನೆಯದಾಗಿ, ನೀವು ಅಟ್‌ಲಿಸ್ಟ್ ಪ್ರತಿ ವರ್ಷ ಆದಮೇಲೆ ಕೇಂದ್ರ ಸರ್ಕಾರಕ್ಕೆ ಒಂದು ಮೆಮೋರಾಂಡಮ್ ಆದರೂ ಕೊಡಬೇಕಲ್ಲಾ. ಮೆಮೋರಾಂಡಮ್ ಕೊಟ್ಟು ವರದಿ ಕೊಟ್ಟರೆ ನಿಮಗೆ ಅಡ್ವಾನ್ಸ್ ಅಮೌಂಟನ್ನಾದರೂ ಕೊಡುತ್ತಾರೆ, ಅಥವಾ ಇದ್ದಂಥ ಹಣದಲ್ಲಿ ಯಾವ ರೀತಿಯಲ್ಲಿ ಮಾಡಿಕೊಳ್ಳಬೇಕು ಎನ್ನುವುದಕ್ಕೆ ಏನಾದರೂ ಆದೇಶವನ್ನು ಕೊಡುತ್ತಾರೆ. ಅದನ್ನಾದರೂ ಮಾಡಬೇಕಲ್ಲಾ.

ಮುಧೋಳ ತಾಲ್ಲೂಕಿನ ಕೆಲವು ಗ್ರಾಮಗಳಲ್ಲಿ ಘಟಪ್ರಭಾ ನದಿಯ ಪ್ರವಾಹ ಹೆಚ್ಚಾಗಿ ತೊಂದರೆ ಉಂಟಾಗಿರುವುದು.

+ ಶ್ರೀ ಗೋವಿಂದ ಎಂ. ಕಾರಜೋಳ (ಮುಧೋಳ) : ಸನ್ಮಾನ್ಯ ಅಧ್ಯಕ್ಷರೆ, ಬೆಳಿಗ್ಗೆಯಿಂದ ನಾನು ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ಕಾದುಕುಳಿತಿದ್ದೇನೆ. ಶೂನ್ಯವೇಳೆಯಲ್ಲಿ ಇಡೀ ಸದನವೇ ಚರ್ಚೆ ಮಾಡಿದೆ. ನನ್ನ ಕ್ಷೇತ್ರದ ಹತ್ತು ಗ್ರಾಮಗಳು ನೀರಿನಲ್ಲಿ ಮುಳುಗಿದ್ದು ಜನರಿಗೆ ಕಕ್ಕಸ್ಸಿಗೆ ಹೋಗುವುದಕ್ಕೂ ಸಹಿತ ಸಾಧ್ಯವಾಗಿಲ್ಲ. ಇಂತಹ ಒಂದು ಗಂಭೀರ ಪರಿಸ್ಥಿತಿ ಇರುವಾಗ ಎಲ್ಲರೂ